ಮಾಡಿ ಅವನನ್ನು ಕೆಲಸದಿಂದ ಬಿಡಿಸಬೇಕು. ಆದರೆ ನಾವಾಗೇ ಬಿಡಿಸಿದರೆ ಮೀಸೆಕೂದಲು ಬೋಳಿಸಿಕೊಳ್ಳಬೇಕಾಗುತ್ತದೆ. ಮೂವತ್ತು ಕಾಸಿಗೂ ಚೌರ! ಏನು ಮಾಡುವುದು?' ಎಂದು ಯೋಚಿಸತೊಡಗಿದರು. ಆಗ ಅವರ ಹೆಂಡತಿ 'ನಿಮ್ಮ ಕೈಯಲ್ಲಂತೂ ಆಗುವುದಿಲ್ಲ. ನನ್ನ ಅಪ್ಪನ ಮನೆಗಾದರೂ ನಾರಾಯಣನನ್ನು ಕರೆದುಕೊಂಡು ಹೋಗಿ. ಅವರೇನಾದರೂ ಮಾಡಿ ಇವನಾಗೆ ಕೆಲಸ ಬಿಟ್ಟು ಹೋಗುವಂತೆ ಮಾಡುತ್ತಾರೆ' ಎಂದಳು. ಅದು ಅಯ್ನೋರಿಗೂ ಸರಿಯೆನ್ನಿಸಿ, ನಾರಾಯಣನನ್ನು ಕರೆದು 'ನೋಡಯ್ಯಾ, ನಾಳೆ ನನ್ನ ಮಾವನ ಮನೆಗೆ ಪ್ರಯಾಣ ಇದೆ. ಕುದುರೆ ಸಿದ್ಧವಾಗಿರಲಿ. ನೀನು ಜೊತೆ ಬಾ. ನಿನಗೂ ಹೆಚ್ಚಿನ ಕಾಸು ಕೊಡುತ್ತೇನೆ. ಔತಣವಂತೂ ಇದ್ದೇ ಇರುತ್ತದೆ' ಎಂದರು. ನಾರಾಯಣ 'ಆಯಿತು ಸ್ವಾಮಿ' ಎಂದ.

ಮಾರನೆಯ ದಿನ ಕುದುರೆ ಏರಿ ಅಯ್ನೋರು ಹೊರಟರು. ಹಿಂದಿನಿಂದ ನಾರಾಯಣ ನಡೆದುಕೊಂಡು ಹೊರಟ. ಮಧ್ಯಾಹ್ನದವರೆಗೂ ನಡೆದು, ದಾರಿಯಲ್ಲಿ ಸಿಕ್ಕ ಹೊಳೆಯ ದಡದಲ್ಲಿ ವಿಶ್ರಾಂತಿಗೆಂದು ಇಳಿದರು. ಅಯ್ನೋರು ಹೊಳೆಯಲ್ಲಿ ಸ್ನಾನ ಮಾಡಿ, ಮಡಿಪಂಚೆಯನ್ನೆಲ್ಲಾ ಒಣ ಹಾಕಿ, ಮೂರು ಕಲ್ಲುಗಳ ಒಲೆ ಹೂಡಿ, ಅನ್ನಕ್ಕಿಟ್ಟು, 'ನಾರಾಯಣ ಸ್ವಲ್ಪ ಅನ್ನ ನೋಡಿಕೊಳ್ಳೊ. ನಾನು ಜಪ ಮಾಡುತ್ತೇನೆ' ಎಂದರು. ಅನ್ನ ಕುದಿದು, ಉಕ್ಕಿ, ಸೀದು ಹೋದರೂ ನಾರಾಯಣ ಸುಮ್ಮನೆ ನೋಡುತ್ತಾ ಕುಳಿತಿದ್ದ! ಅದರ ವಾಸನೆಗೆ ಎದ್ದು ಬಂದ ಅಯ್ನೋರು 'ಅನ್ನ ಸೀದು ಹೋದರೂ ಸುಮ್ಮನೆ ಕುಳಿತಿದ್ದೀಯಲ್ಲಾ! ಒಲೆ ನಂದಿಸಬೇಡವೆ?' ಎಂದು ರೇಗಿದರು. ಅದಕ್ಕೆ ನಾರಾಯಣ 'ಸ್ವಾಮಿ, ಅನ್ನ ನೋಡಿಕೊಳ್ಳೊ ಎಂದು ಹೇಳಿದ್ದಿರಿ. ಅದರಂತೆ ನಾನು ನೋಡಿಕೊಳ್ಳುತ್ತಿದ್ದೇನೆ ಅಷ್ಟೆ' ಎಂದನು. 'ಮತ್ತಿನ್ನೇಕೆ ಅನ್ನ ಮಾಡುವುದು? ಹೇಗೂ ಮಾವನ ಮನೆಗೆ ಹೋಗುತ್ತೇನಲ್ಲಾ' ಎಂದು ಮತ್ತೆ ಜಪಕ್ಕೆ ಕೂತ ಅಯ್ನೋರು 'ಹರಿ ನಾರಾಯಣ, ಹರಿ ನಾರಾಯಣ' ಎಂದು ನೂರೆಂಟು ಬಾರಿ ಹೇಳಿ, ಜಪ ಮುಗಿಸಿ ಎದ್ದರು. ಒಣಗಿ ಹಾಕಿದ್ದ ಮಡಿಪಂಚೆಯನ್ನು ನೋಡಿದರೆ ಅದೆಲ್ಲಾ ಹರಿದು ಬಿದ್ದಿದೆ. 'ಇದೇನೋ ನಾರಾಯಣಾ?' ಎಂದ ಅಯ್ನೋರಿಗೆ, 'ಸ್ವಾಮಿ, ನೀವೇ ಹೇಳಿದಿರಲ್ಲಾ, ಹರಿ ನಾರಾಯಣ, ಹರಿ ನಾರಾಯಣ ಎಂದು. ಅದಕ್ಕೆ ನಾನೇ ಈ ಪಂಚೆಯನ್ನು ಹರಿದು ಹಾಕಿದೆ' ಎಂದನು. ಏನೂ ಮಾಡಲು ತೋಚದ ಅಯ್ನೋರು, ಅರೆಬೆತ್ತಲೆಯಾಗಿಯೇ, ಕತ್ತಲಾದ ಮೇಲೆ ಮಾವನ ಮನೆ ತಲುಪಲು ನಿರ್ಧರಿಸಿದರು. ಹಸಿವಿನಿಂದ ಕಂಗಾಲಾಗಿದ್ದ ಅವರು ಮೊದಲು ನಾರಾಯಣನನ್ನು ಕಳುಹಿಸಿ, ತಾನು ಬರುತ್ತಿರುವ ವಿಚಾರವನ್ನು ತಿಳಿಸಿ ಔತಣಕ್ಕೆ ಸಿದ್ಧಪಡಿಸುವಂತೆ ಸುದ್ದಿ ಕಳಿಸಿದರು.

ಅವರಿವರನ್ನು ಕೇಳಿಕೊಂಡು ಅಯ್ನೋರ ಮಾವನ ಮನೆಗೆ ಬಂದ ನಾರಾಯಣ, 'ಸ್ವಾಮಿ ನಿಮ್ಮ ದೊಡ್ಡ ಅಳಿಯ ಊರಿಗೆ ಬರುತ್ತಿದ್ದಾರೆ. ಅವರು ಯಾವುದೋ ವ್ರತದಲ್ಲಿದ್ದಾರೆ. ಅದು ಪೂರ್ಣವಾಗಬೇಕಾದರೆ ಇಂದು ಮನೆಯವರಾರೂ ಅವರನ್ನು ಮಾತನಾಡಿಸಬಾರದಂತೆ. ಮನೆಯ ಅಳಿಯಂದಿರಿಗೆಲ್ಲಾ ಮುಗ್ಗಲು ರಾಗಿ ಅಂಬಲಿಯ ಊಟವೇ ಆಗಬೇಕಂತೆ. ಅದನ್ನು ಸಿದ್ಧಪಡಿಸಿ ಇಡಿ ಎಂದು ಹೇಳಲು ನನ್ನನ್ನು ಕಳುಹಿಸಿದ್ದಾರೆ' ಎಂದ. 'ದೊಡ್ಡ ಅಳಿಯಂದಿರು ಬರುತ್ತಿದ್ದಾರೆ. ಅದೂ ವ್ರತ ಪೂರ್ತಿ ಮಾಡಲು' ಎಂದು ಮಾವನವರಿಗೆ ಖುಷಿಯಾಗಿ, ಅದೇ ಊರಿನಲ್ಲಿದ್ದ ಇನ್ನಿಬ್ಬರು ಅಳಿಯಂದಿರಿಗೂ ಹೇಳಿ ಕಳುಹಿಸಿ ಬರಮಾಡಿಕೊಂಡು, ಮಡಿಯಲ್ಲಿ, ಮುಗ್ಗಲು ರಾಗಿ ಅಂಬಲಿ ಸಿದ್ಧಪಡಿಸಿ ಕಾಯತೊಡಗಿದರು. ಇತ್ತ ಹಿಂದಕ್ಕೆ ಹೊರಟ ನಾರಾಯಣ ಅಯ್ನೋರ ಬಳಿಗೆ ಬಂದು, 'ಸ್ವಾಮಿ ಇವತ್ತು ನಿಮ್ಮ ಮಾವನವರ ಮನೆಯಲ್ಲಿ ವ್ರತವಂತೆ. ಯಾರೂ ನಿಮ್ಮನ್ನು ಮಾತನಾಡಿಸುವುದಿಲ್ಲವಂತೆ. ನೀವು ಯಾರನ್ನೂ ಮಾತನಾಡಿಸಬಾರದಂತೆ.